ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ
ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ
ಚಾವಿಸನಿನಿ, ಮೈಸೂರು-570017
Telephone No:0821-2417105

CHAMUNDESHWARI ELECTRICITY
SUPPLY CORPORATION LIMITED
(A Governent of Karnataka Undertaking)
Corporate office, CESC , Mysuru-570017
Web Site: www.cescmysore.org
E-mail ID : cfo@cescmysore.org

Company Identity Number(CIN): U40109KA2004SGC035177

ವಿಷಯ: 2020-21ನೇ ಸಾಲಿನ 3 ನೇ & 4 ನೇ ತ್ರೈಮಾಸಿಕ ಅವಧಿಗೆ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಕಂದಾಯ ಬಡ್ಜೆಟ್ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 22 ದಿನಾಂಕ: 08.04.2020.
2. ಈ ಕಛೇರಿ ಪತ್ರದ ಸಂಖ್ಯೆ 1355 ದಿನಾಂಕ : 28.04.2020.
3. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 1637 ದಿನಾಂಕ 04.05.2020.
4. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 3760 ದಿನಾಂಕ 10.06.2020.
5. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 478 ದಿನಾಂಕ 15.07.2020
6. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9166 ದಿನಾಂಕ 26.08.2020
7. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9575-78 ದಿನಾಂಕ 31.08.2020
8. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9776-77 ದಿನಾಂಕ 03.09.2020
9. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 12071-74 ದಿನಾಂಕ 29.09.2020
10. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 13464-66 ದಿನಾಂಕ 17.10.2020

***************

**ಪೀಠಿಕೆ:**

1. ಉಲ್ಲೇಖ (1) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಚಾ.ವಿ.ಸ.ನಿ.ನಿ ಯ ಎಲ್ಲಾ ಲೆಕ್ಕಘಟಕಗಳಿಗೆ ವಿತ್ತ ವರ್ಷ 2020-21 ನೇ ಸಾಲಿಗೆ ದಿನಾಂಕ: 01.04.2020 ರಿಂದ 30.06.2020 ರ ಮೊದಲನೇ ತ್ರೈಮಾಸಿಕ ಅವಧಿಗೆ ಮುಖ್ಯ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಒಟ್ಟು 16391.00 ಲಕ್ಷಗಳ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
2. ಉಲ್ಲೇಖ (2) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಪ್ರಧಾನ ವ್ಯವಸ್ಥಾಪಕರು (ಖರೀದಿ) ಶಾಖೆಗೆ ಲೆಕ್ಕಶೀರ್ಷಿಕೆ 74.8027 (Repairs to Computers & Printers) ರಡಿಯಲ್ಲಿ ರೂ.5.00 ಲಕ್ಷ ಹಾಗೂ ಲೆಕ್ಕಶೀರ್ಷಿಕೆ 76.1537 (Printing and Stationary) ರಡಿಯಲ್ಲಿ ಮುದ್ರಣ ಮತ್ತು ಇತರೆಗಾಗಿ ರೂ 50.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
3. ಉಲ್ಲೇಖ (3) ರಲ್ಲಿ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಶಾಖೆಯಿಂದ ಕಛೇರಿ ಟಿಪ್ಪಣಿ ಮೂಲಕ ಕೋರೋನ ವೈರಸ್ ತಡೆಗಟ್ಟುವ ಸಂಬಂಧ ಮುಂಜಾಗ್ರತಾ ಕ್ರಮವಾಗಿ ಮೈಸೂರು ನಗರದ ವಿವಿದ ಸ್ಥಳಗಳಲ್ಲಿ ಹೊಸದಾಗಿ ಸ್ಥಾಪಿಸಿರುವ ಮಾರುಕಟ್ಟೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ಸಲುವಾಗಿ ತಾತ್ಕಾಲಿಕ ವಿದ್ಯುತ್ ದೀಪಗಳನ್ನು ಅಳವಡಿಸಲು ಒಟ್ಟಾರೆ 3.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿಗೆ ಬಿಡುಗಡೆ ಮಾಡಲಾಗಿದೆ.
4. ಉಲ್ಲೇಖ (4) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ರವರಿಗೆ ಲೆಕ್ಕಶೀರ್ಷಿಕೆ 74, 76 ರಡಿಯಲ್ಲಿ ರೂ.220 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
5. ಉಲ್ಲೇಖ (5) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಚಾ.ವಿ.ಸ.ನಿ.ನಿ ಯ ಎಲ್ಲಾ ಲೆಕ್ಕಘಟಕಗಳಿಗೆ ವಿತ್ತ ವರ್ಷ 2020-21 ನೇ ಸಾಲಿಗೆ ದಿನಾಂಕ: 01.07.2020 ರಿಂದ 30.09.2020 ರ ಎರಡನೇ ತ್ರೈಮಾಸಿಕ ಅವಧಿಗೆ ಮುಖ್ಯ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಒಟ್ಟು 15967.81 ಲಕ್ಷಗಳ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.



Scanned with CamScanner

6. ಉಲ್ಲೇಖ (6) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಪ್ರಧಾನ ವ್ಯವಸ್ಥಾಪಕರು, ಆಂತರಿಕ ನಿರ್ವಹಣೆ ಶಾಖೆ ನಿಗಮ ಕಾರ್ಯಾಲಯ ರವರಿಗೆ 76.1127 ರಡಿಯಲ್ಲಿ 6.53 ಲಕ್ಷ, ಉಪಪ್ರಧಾನ ವ್ಯವಸ್ಥಾಪಕರು(ಕಾಮಗಾರಿ), ನಿಗಮ ಕಾರ್ಯಾಲಯ ರವರಿಗೆ 74.2007 ರಡಿಯಲ್ಲಿ 50.00 ಲಕ್ಷ ಹಾಗೂ 74.3007 ರಡಿಯಲ್ಲಿ 25.00 ಲಕ್ಷ ಮತ್ತು ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಮೈಸೂರು ರವರಿಗೆ ಲೆಕ್ಕಶೀರ್ಷಿಕೆ 76.1297 ರಡಿಯಲ್ಲಿ 5.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

7. ಉಲ್ಲೇಖ (7) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2019-20 ಹಾಗೂ 2020-21 ನೇ ಸಾಲಿಗೆ ನಿಗಮದ ನೌಕರರ ಸಮವಸ್ತ್ರ ಖರೀದಿಗಾಗಿ ಉಪಪ್ರಧಾನ ವ್ಯವಸ್ಥಾಪಕರು(ಖರೀದಿ), ರವರು ರೂ.65,59,405.00 ಗಳ ಖರೀದಿ ಅನುದಾನವನ್ನು ಕೋರಿದ್ದು, ಆಂತರಿಕ ನಿರ್ವಹಣೆ ಶಾಖೆ, ನಿಗಮ ಕಛೇರಿ, ಮೈಸೂರಿಗೆ ಲೆಕ್ಕಶೀರ್ಷಿಕೆ 75.7407 ರಲ್ಲಿ ರೂ. 65,59,405/-ಗಳ ಖರೀದಿ ಅನುದಾನ ಮತ್ತು ಎನ್.ಆರ್.ಮೊಹಲ್ಲಾ ವಿಭಾಗಕ್ಕೆ ಅಷ್ಟೇ ಮೊತ್ತದ ಕಂದಾಯ ಬಜೆಟ್ ಬಿಡುಗಡೆ ಮಾಡಲಾಗಿದೆ.

8. ಉಲ್ಲೇಖ (8) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2020-21 ನೇ ಸಾಲಿನ 2 ನೇ ತ್ರೈಮಾಸಿಕ ಅವಧಿಗೆ ಹೆಚ್ಚುವರಿಯಾಗಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಚಾವಿಸನಿನಿ, ಮೈಸೂರು ರವರಿಗೆ, ಲೆಕ್ಕ ಶೀರ್ಷಿಕೆ 74.2007 ರಡಿಯಲ್ಲಿ ರೂ.45.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್‌ನ್ನು ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

9. ಉಲ್ಲೇಖ (9) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2020-21 ನೇ ಸಾಲಿನ ದಸರಾ ದೀಪಾಲಂಕಾರದ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 76.1297 ರಡಿಯಲ್ಲಿ ಒಟ್ಟು ರೂ. 300.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

10. ಉಲ್ಲೇಖ (10) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2020-21 ನೇ ಸಾಲಿನ ಶ್ರೀರಂಗಪಟ್ಟಣದ ದಸರಾ ದೀಪಾಲಂಕಾರದ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 76.1297 ರಡಿಯಲ್ಲಿ ಒಟ್ಟು ರೂ. 7.5 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಮಂಡ್ಯ ರವರಿಗೆ ಬಿಡುಗಡೆಗೊಳಿಸಲಾಗಿದೆ.

ವಿತ್ತ ವರ್ಷ 2020-21 ನೇ ಸಾಲಿನ 3 ನೇ & 4 ನೇ ತ್ರೈಮಾಸಿಕ ಅವಧಿಗೆ ಕಂದಾಯ ಬಡ್ಜೆಟ್/ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಈ ಕೆಳಗಿನಂತೆ ಆದೇಶಿಸಿದೆ.

ಕ್ರಸಂ. ಮುಆಅ/ಪ್ರವ್ಯ(ಲೆ&ಸಂ)/ಉಪ್ರವ್ಯ(ಸಂ&ಆವ್ಯ)/ಸಪ್ರವ್ಯ(ಹ&ಸಂ)/ವ್ಯ(ಹ&ಸಂ)/ cys-942 ದಿನಾಂಕ: 28 OCT 2020

## ಅಧಿಕೃತ ಜ್ಞಾಪನಾ

1. 2020-21ನೇ ಸಾಲಿನ 3ನೇ & 4 ನೇ ತ್ರೈಮಾಸಿಕ ಅವಧಿ ದಿನಾಂಕ:01.10.2020 ರಿಂದ 31.03.2020ಕ್ಕೆ ಅನ್ವಯವಾಗುವಂತೆ ನಿಗಮದ ಎಲ್ಲಾ ಲೆಕ್ಕಘಟಕಗಳಿಗೆ ಅಗತ್ಯವಿರುವ ಕಂದಾಯ ವೆಚ್ಚಗಳಿಗೆ ಲೆಕ್ಕ ಶೀರ್ಷಿಕೆ 74, 75 ಮತ್ತು 76ರ ಅಡಿಯಲ್ಲಿ ಒಟ್ಟು ರೂ. 29333.00 ಲಕ್ಷಗಳ ಕಂದಾಯ ಬಡ್ಜೆಟ್/ಖರೀದಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ಲೆಕ್ಕ ಶೀರ್ಷಿಕೆವಾರು ಮೊತ್ತದ ವಿವರಗಳನ್ನು ಪ್ರತ್ಯೇಕ ಅನುಬಂಧದಲ್ಲಿ ನಮೂದಿಸಿದ್ದು ವೆಚ್ಚವನ್ನು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ನಿರ್ವಹಿಸಲು ಸೂಚಿಸಿದೆ. ಹಾಗೂ ಲೆಕ್ಕ ಶೀರ್ಷಿಕೆ 74.1, 74.5, 74.6, 74.8, ಮತ್ತು 76 (ಆಂತರಿಕ ನಿರ್ವಹಣೆ ಶಾಖೆ ನಿಗಮ ಕಛೇರಿ ಅಂಕಣವನ್ನು ಹೊರತುಪಡಿಸಿ) ರಡಿಯಲ್ಲಿ ಎಲ್ಲಾ ಲೆಕ್ಕಘಟಕಗಳ ಪರವಾಗಿ ವಲಯ ಕಛೇರಿಗಳಿಗೆ ಬಿಡುಗಡೆ ಮಾಡಿರುವ ಕಂದಾಯ ಬಡ್ಜೆಟ್/ಖರೀದಿ ಅನುದಾನವನ್ನು ಮೂರನೇ ತ್ರೈಮಾಸಿಕಕ್ಕೆ ಮಾತ್ರ ಬಿಡುಗಡೆಗೊಳಿಸಲಾಗಿದೆ.

2. ಲೆಕ್ಕ ಶೀರ್ಷಿಕೆ 74.1, 74.5, 74.6, 74.8, ಮತ್ತು 76 (ಆಂತರಿಕ ನಿರ್ವಹಣೆ ಶಾಖೆ ನಿಗಮ ಕಛೇರಿ ಅಂಕಣವನ್ನು ಹೊರತುಪಡಿಸಿ )ರಡಿಯಲ್ಲಿ ಎಲ್ಲಾ ಲೆಕ್ಕಘಟಕಗಳ ಪರವಾಗಿ ವಲಯ ಕಛೇರಿಗಳಿಗೆ ಬಿಡುಗಡೆ ಮಾಡಿರುವ (ಮೂರನೇ ತ್ರೈಮಾಸಿಕಕ್ಕೆ ಮಾತ್ರ) ಕಂದಾಯ ಬಡ್ಜೆಟ್/ಖರೀದಿ ಅನುದಾನವನ್ನು **ಮುಖ್ಯ ಇಂಜಿನಿಯರ್(ವಿ), ಮೈಸೂರು/ಹಾಸನ ವಲಯ ಕಛೇರಿಯಿಂದ ಲೆಕ್ಕಘಟಕಗಳಿಗೆ ಅಗತ್ಯತೆಗೆ ಅನುಗುಣವಾಗಿ ಮರು ಹಂಚಿಕೆ ಮಾಡುವುದು. ಹಾಗೂ ಎಫ್‌ಎಂಎಸ್ ತಂತ್ರಾಂಶದಲ್ಲಿ ಅಳವಡಿಸಲು ಕ್ರಮಕೈಗೊಳ್ಳುವುದು.**

3. ಯಾವುದೇ ಕಾರಣಕ್ಕೂ ಬಡ್ಜೆಟ್ ಅನುಮೋದನೆ ಇಲ್ಲದೇ ಖರ್ಚು ಮಾಡಲು ಅವಕಾಶವಿರುವುದಿಲ್ಲ.



Scanned with CamScanner

4. ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಬಿಡುಗಡೆಗೊಳಿಸಿರುವ ಬಡ್ಜೆಟ್ ಮೊತ್ತವನ್ನು ಸಂಪೂರ್ಣವಾಗಿ ಖರ್ಚು ಮಾಡಲೇಬೇಕೆಂಬ ನಿಬಂಧನೆಯಿರುವುದಿಲ್ಲ. ಯಾವುದೇ ವೆಚ್ಚಗಳನ್ನು ನಿಗಮದ ಆರ್ಥಿಕ ಸ್ಥಿತಿಯನ್ನು ಮತ್ತು ಪ್ರಸ್ತುತ ಮಾರುಕಟ್ಟೆಯ ವಾಸ್ತವಿಕ ವೆಚ್ಚಗಳನ್ನು ಗಮನದಲ್ಲಿರಿಸಿಕೊಂಡು ನಿಯಮಿತವಾಗಿ ಖರ್ಚು ಮಾಡತಕ್ಕದ್ದು.
5. ಯಾವುದೇ ಲೆಕ್ಕ ಶೀರ್ಷಿಕೆಯಡಿ ನಿಗದಿತ ಬಡ್ಜೆಟ್ ಮೀರಿ ವೆಚ್ಚವಾಗಬೇಕಿದ್ದಲ್ಲಿ ಹೆಚ್ಚುವರಿ ಬಡ್ಜೆಟ್ ಮೊತ್ತಕ್ಕೆ ಆಂತರಿಕ ಲೆಕ್ಕ ಪರಿಶೋಧನೆಯಿಂದ ದೃಢೀಕರಿಸಿ, ವಲಯ ಕಛೇರಿ ಮೈಸೂರು/ಹಾಸನರವರ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿ ಪೂರ್ವಭಾವಿ ಅನುಮೋದನೆ ಪಡೆಯುವುದು.
6. ಅಧಿಕ ಬಜೆಟ್ ಮಂಜೂರು ಮಾಡಬೇಕಿದ್ದಲ್ಲಿ, ಈಗಾಗಲೇ ಇರುವ ಬಜೆಟ್ ಮರು ಹಂಚಿಕೆಮಾಡಿದ ನಂತರವೇ ಪ್ರಸ್ತಾವನೆಯನ್ನು ಸಲ್ಲಿಸುವುದು.
7. ಮುಂದಿನ ತ್ರೈಮಾಸಿಕಕ್ಕೆ ಬಡ್ಜೆಟ್ ಬಿಡುಗಡೆಗೊಳಿಸುವ ಮೊದಲು ಹಿಂದಿನ ತ್ರೈಮಾಸಿಕದ ಬಡ್ಜೆಟ್ ಮೊತ್ತ ಉಪಯೋಗವಾದ ಬಗ್ಗೆ ಮಾಹಿತಿಯನ್ನು ತ್ರೈಮಾಸಿಕ ಮುಕ್ತಾಯಕ್ಕೆ ಮೊದಲೇ ಅಂದರೆ 15 ದಿನಗಳ ಮುಂಚೆಯೇ **ಎಲ್ಲಾ ಲೆಕ್ಕಘಟಕಗಳ ಮಾಹಿತಿಯನ್ನು ಕ್ರೋಢೀಕರಿಸಿ ಮೈಸೂರು/ಹಾಸನ ವಲಯ ಕಛೇರಿಯವರು ಕಡ್ಡಾಯವಾಗಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು.**
8. ಸದರಿ ರೆವಿನ್ಯೂ ಶೀರ್ಷಿಕೆಗಳಲ್ಲಿ ಪ್ರತಿ ತಿಂಗಳು ಉಂಟಾಗುವ ವೆಚ್ಚದ ಮಾಹಿತಿಯನ್ನು ಲೆಕ್ಕ ಘಟಕಗಳು ನಂತರದ ತಿಂಗಳ 10ನೇ ತಾರೀಖಿನೊಳಗೆ ತಪ್ಪದೇ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು.
9. ಲೆಕ್ಕಘಟಕಗಳು ಹೆಚ್ಚುವರಿ ಕಂದಾಯ ಬಡ್ಜೆಟ್‌ನ ಪ್ರಸ್ತಾವನೆಯನ್ನು ನೇರವಾಗಿ ನಿಗಮ ಕಛೇರಿಗೆ ಸಲ್ಲಿಸಿದಲ್ಲಿ ಅದನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ವಲಯ ಕಛೇರಿ, ಮೈಸೂರು/ಹಾಸನ ರವರ ಶಿಫಾರಸ್ಸಿನೊಂದಿಗೆ ಮಾತ್ರ ಸಲ್ಲಿಸತಕ್ಕದ್ದು.
10. ಲೆಕ್ಕಘಟಕಗಳು ಕಂದಾಯ ವೆಚ್ಚಗಳನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಅನುಗುಣವಾಗಿ ವೆಚ್ಚಗಳನ್ನು ದಾಖಲಿಸುವುದು.
11. ನಿಧಿಕೋರಿಕೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಆಂತರಿಕ ಲೆಕ್ಕಪರಿಶೋಧಕರು ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಲ್ಲಿ ಅಗತ್ಯ ಕಂದಾಯ ಬಡ್ಜೆಟ್ ಮಂಜೂರಾಗಿರುವ ಬಗ್ಗೆ ಪರಿಶೀಲನೆ ಮಾಡುವುದು. ಹೆಚ್ಚುವರಿ ಬಡ್ಜೆಟ್ ಅಗತ್ಯವಿದ್ದಲ್ಲಿ ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾತಿ ಪಡೆಯುವುದು. ತಪ್ಪಿದಲ್ಲಿ ಕೋರಿತ ನಿಧಿಯನ್ನು ಬಿಡುಗಡೆಗೊಳಿಸಲಾಗುವುದಿಲ್ಲ.
12. **2020–21ನೇ ಸಾಲಿನ 1 ನೇ & 2 ನೇ ತ್ರೈಮಾಸಿಕ ಅವಧಿಗೆ ಬಿಡುಗಡೆಗೊಳಿಸಿರುವ ತಾತ್ಕಾಲಿಕ(Tentative) ಕಂದಾಯ ಬಜೆಟ್ ಅನ್ನು ಅಂತಿಮ ಎಂದು ಪರಿಗಣಿಸುವುದು.**

ಮುಖ್ಯ ಆರ್ಥಿಕ ಅಧಿಕಾರಿ

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ),ಮೈಸೂರು/ಹಾಸನ ವಲಯ ಕಛೇರಿ, ಚಾವಿಸನಿನಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ) ನಿಗಮ ಕಛೇರಿ ಚಾ.ವಿ.ಸ.ನಿ.ನಿ.,
3. ಪ್ರಧಾನ ವ್ಯವಸ್ಥಾಪಕರು, ಲೆಕ್ಕಗಳು ಮತ್ತು ಕಂದಾಯ ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ಮೈಸೂರು/ಹಾಸನ ವಲಯ ಕಛೇರಿ ಚಾವಿಸನಿನಿ.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಕಛೇರಿ, ಚಾವಿಸನಿನಿ,
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
7. ಉಪಪ್ರಧಾನ ವ್ಯವಸ್ಥಾಪಕರು(ವಿ), ಎಂ.ಐ.ಎಸ್ ಶಾಖೆ, ನಿಗಮ ಕಛೇರಿ, ಮೈಸೂರು–ಚಾ.ವಿ.ಸ.ನಿ.ನಿ.,– ಅಂತರ್ಜಾಲದಲ್ಲಿ ಪ್ರಕಟಿಸಲು.
8. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಲೆಕ್ಕಪರಿಶೋಧನೆ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ.
9. ವ್ಯವಸ್ಥಾಪಕರು(ಹ ಮತ್ತು ಸಂ), ಸಂಪನ್ಮೂಲ ಶಾಖೆ/ಮುಖ್ಯ ಕಡತ.



Scanned with CamScanner